ಸಿಸಿ 27/2016
ಪಿ ಡಬ್ಲೂ-7

**ದಿಃ 27.11.2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಬಿಯೋಜಕರಿಂದಃ

ಸಾಕ್ಷಿ ದಿಃ 05-07-2010 ರಂದು ಅಮಾನತ್ತು ಪಡಿಸಿಕೊಂಡಂತಹ ಲೆಕ್ಕದ ಪುಸ್ತಕವನ್ನು ನೋಡಿ ಗುರ್ತಿಸಿದ್ದು ಅದನ್ನು ನಿಪಿ 7 ಎಂದು ಗುರ್ತಿಸಲಾಯಿತು. ಸಾಕ್ಷಿ ನ್ಯಾಯಾಲಯದಲ್ಲಿರುವ ಆರೋಪಿಯನ್ನು ನೋಡಿ ಗುರ್ತಿಸಿರುತ್ತಾನೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಆರ್ ಪಿ ವಕೀಲರಿಂದಃ

ನಾನು 9 ನೇ ತರಗತಿಯವರೆಗೆ ಓದಿರುತ್ತೇನೆ. ಎಷ್ಟು ಜನ ಪೋಲಿಸರು ಬಂದಿದ್ದರೂ ಮತ್ತು ಅವರ ಹೆಸರು ಹಾಗೂ ಅವರ ಪದನಾಮ ಹೇಳಲು ಆಗುವುದಿಲ್ಲ. ಪಂಚನಾಮೆಯನ್ನು ಬರೆದ ಪೋಲಿಸರ ಹೆಸರು ಮತ್ತು ಪದನಾಮ ಗೊತ್ತಿಲ್ಲ. ನಿಪಿ 7 ನ್ನು ಆರೋಪಿ ತಮ್ಮ ಮನೆಯಿಂದ ತಾನೇ ತಂದು ಹಾಜರು ಪಡಿಸಿರುತ್ತಾನೆ. ನಿಪಿ 7 ರ ತರಹ ಪುಸ್ತಕಗಳು ಮಾರುಕಟ್ಟೆಯಲ್ಲಿ ಸಾಕಷ್ಟು ಸಿಗುತ್ತವೆ ಎಂದರೆ ನಿಜ. ಪಂಚನಾಮೆಗೆ ಪೋಲಿಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡಿಲ್ಲ ಹಾಗೂ ನನ್ನ ಎದುರು ಯಾವುದೇ ದಾಖಲೆಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ಉಳಿದ ರೈತರು ಸೇರಿ ಪೋಲಿಸರೊಂದಿಗೆ ನಿಪಿ 7 ಮತ್ತು ನಿಪಿ 5 ನ್ನು ಸೃಷ್ಟಿ ಮಾಡಿರುತ್ತೇವೆ ಅಂದರೆ ಸರಿಯಲ್ಲ. ಆರೋಪಿಗೆ ನಾನು ಭತ್ತವನ್ನು ಮಾರಾಟ ಮಾಡಿರುವ ಕುರಿತು ದಾಖಲೆಗಳನ್ನು ಪೋಲಿಸರಿಗೆ ಕೊಟ್ಟಿಲ್ಲ. ನಾನು ಕೊಟ್ಟಂತಹ ಭತ್ತವನ್ನು ಆರೋಪಿ ತನ್ನ ಬಳಿ ಇಟ್ಟುಕೊಟ್ಟಿದ್ದ ಎನ್ನುವುದಕ್ಕೆ ನಾನು ಪೋಲಿಸರಿಗೆ ದಾಖಲೆಯನ್ನು ಕೊಟ್ಟಿಲ್ಲ. ಆರೋಪಿ ನನಗೆ 1,25,000 ರೂ ಕೊಡಬೇಕಾಗಿರುತ್ತದೆ ಎನ್ನುವ ಕುರಿತು ನನ್ನ ಬಳಿ ದಾಖಲೆಗಳು ಇಲ್ಲ ಎನ್ನುವುದು ನಿಜ. ಆರೋಪಿ ಯಾರಿಗೆ ಭತ್ತವನ್ನು ಮಾರಾಟ ಮಾಡಿ ಹಣ ಪಡೆದಿರುತ್ತಾನೆ ಎಂದು ಮಾಹಿತಿ ಇರುವುದಿಲ್ಲ. ನಾವು ಆರೋಪಿಗಳಿಗೆ ಯಾವುದೇ ಭತ್ತವನ್ನು ಕೊಟ್ಟಿಲ್ಲ ಇತರರೊಂದಿಗೆ ಸೇರಿ ಆರೋಪಿಗೆ ಭತ್ತ ಕೊಟ್ಟಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಆರೋಪಿ ನನಗೆ ಮತ್ತು ಇತರರಿಗೆ ಭತ್ತದ ಹಣ ಕೊಡುವ ಬಾಕಿ ಇಲ್ಲ ಮತ್ತು ಮೋಸ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾ. ದಲ್ಲಿ ಸಾಕ್ಷಿ ಹೇಳಿಕೆಯಂತೆ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಪಡಿಸಿದೆ).

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಹರಿಹರ.